ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 307 |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 15-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡಿ ನಿರ್ವಹಣೆ ಮಾಡುತ್ತಿರುವ ಸಂಸ್ಥೆ ಯಾವುದು: ಒಡಂಬಡಿಕೆ ಮಾಡಿಕೊಂಡಿರುವ ಅನ್ವಯ ಇವರ ಅವಧಿ ಯಾವಾಗ ಮುಗಿದಿದೆ; | ಬೆಂಗಳೂರು-ನೆಲಮಂಗಲ ವಿಭಾಗದ ಹೆದ್ದಾರಿಯನ್ನು M/s. Navayuga Tollway Pvt. Ltd. ರವರು ನಿರ್ಮಿಸಿರುತ್ತಾರೆ. ಕರಾರು ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027ರ ವರೆಗೆ ಇರುತ್ತದೆ. ರಿಯಾಯಿತಿ ದಾರರು, ಕರಾರಿನನ್ವಯ ಹೆದ್ದಾರಿ ನಿರ್ವಹಣೆ ಮಾಡದ ಕಾರಣ ಭಾರತೀಯ ರಾಷ್ಟ್ರೀಯ ಹೆದಾರಿ ಪ್ರಾಧಿಕಾರ ದವರು ದಿನಾಂಕ:10.02.2021 ರಂದು ಗುತ್ತಿಗೆಯನ್ನು ರದ್ದುಗೊಳಿಸಲು ಸೂಚನೆ ನೀಡಿರುತ್ತಾರೆ. ಅದರಂತೆ ರಿಯಾಯಿತಿದಾರರು ಯೋಜನೆಯಿಂದ ನಿರ್ಗಮಿಸಿದ್ದು, ರಿಯಾಯಿತಿ ಗುತ್ತಿಗೆ ಕರಾರನ್ನು ರದ್ದುಗೊಳಿಸಿ ದಿನಾಂಕ:21.02.2021 ರಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವಹಿಸಿಕೊಂಡು ಟೋಲ್ ಶುಲ್ಕ ಸಂಗ್ರಹಣೆ ಮಾಡಲಾಗುತ್ತಿದೆ ಎಂದು ವರದಿಸಿರುತ್ತಾರೆ.<br><br>ನೆಲಮಂಗಲ-ತುಮಕೂರು ವಿಭಾಗವನ್ನು M/s. JAS Tollway Pvt. Ltd ರವರಿಂದ ನಿರ್ಮಿಸಲಾಗಿದೆ ಹಾಗೂ ಕರಾರು ಒಪ್ಪಂದದ ಪ್ರಕಾರ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ದಿನಾಂಕ:20.07.2021ಕ್ಕೆ ಪೂರ್ಣಗೊಳಿಸಲು ನಿಗದಿಪಡಿಸಲಾಗಿದ್ದು, ಹಾಗೂ ಸದರಿ ಸಂಸ್ಥೆಯವರು ಮದ್ಯಸ್ಥಿಕೆ ನ್ಯಾಯಮಂಡಳಿಯ (Arbitration Tribunal) ಮೊರೆ ಹೋಗಿದ್ದು, ಸ್ಥಳೀಯ ವೈಯಕ್ತಿಕ ಸಂಚಾರ (Local Personal Traffic) ಮತ್ತು ಸ್ಥಳೀಯ ವಾಣಿಜ್ಯ ಸಂಚಾರ (Local Commercial Traffic) ಸೋರಿಕೆಯಿಂದ ಮಧ್ಯಸ್ಥಿಕೆ ನ್ಯಾಯಮಂಡಳಿ ಯವರು ಸದರಿ ಸಂಸ್ಥೆಗೆ 479 ದಿನಗಳ ವಿಸ್ತರಣೆಯನ್ನು ನೀಡಿರುವುದರಿಂದ ನಿರ್ವಹಣಾ ದಿನಾಂಕ:06.11.2022 ರಂದು ಪೂರ್ಣಗೊಂಡಿರುತ್ತದೆ. ನಂತರ ಚೊಕ್ಕೇನಹಳ್ಳಿ, ಕುಲುಮೇಪಾಳ್ಯ ಟೋಲ್ ಸಂಗ್ರಹ ಬಳಕೆದಾರರ ಶುಲ್ಕವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ |

| | | |
|---|---|---|
| | | ಪ್ರಾಧಿಕಾರದವರು ದಿನಾಂಕ:07.11.2022 ರಂದು ವಹಿಸಿಕೊಂಡಿದ್ದು, ಟೋಲ್ ಶುಲ್ಕ ಸಂಗ್ರಹ ಏಜೆನ್ಸಿಯವರಾದ ಮೆ: ಶ್ರೀ ಸಾಯಿ ಎಂಟರ್ ಪ್ರೈಸಸ್ ರವರನ್ನು ಹೆದ್ದಾರಿ ನಿರ್ವಹಣೆಗಾಗಿ ನೇಮಿಸಲಾಗಿರುತ್ತದೆ ಹಾಗೂ ಟೋಲ್ ಶುಲ್ಕ ಸಂಗ್ರಹಿಸಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಟೋಲ್ ಖಾತೆಗೆ ಜಮೆ ಮಾಡಲಾಗಿರುತ್ತದೆ ಎಂದು ವರದಿಸಿರುತ್ತಾರೆ. |
| ಆ) | ಸದರಿ ರಸ್ತೆಯ ನಿರ್ವಹಣೆ ಸಂಸ್ಥೆಯ ಒಡಂಬಡಿಕೆ ಅವಧಿ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರವು ಈ ಸಂಬಂಧ ಇಲ್ಲಿಯವರೆಗೆ ನಡೆಸಿರುವ ಪತ್ರ ವ್ಯವಹಾರಗಳ ಯಥಾ ಪ್ರತಿ ನೀಡುವುದು; | ಸದರಿ ಹೆದ್ದಾರಿಯ ಬೆಂಗಳೂರು – ನೆಲಮಂಗಲ ವಿಭಾಗದ ಕಿ.ಮೀ.10.00 ರಿಂದ 29.50 ರವರೆಗೆ ಒಡಂಬಡಿಕೆ ಅವಧಿಯು ಮುಗಿದಿರುವುದಿಲ್ಲ. ರಿಯಾಯಿತಿದಾರರ ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027ರ ವರೆಗೆ ಇರುತ್ತದೆ. ರಿಯಾಯಿತಿದಾರರು ಹೆದ್ದಾರಿಯನ್ನು ಕರಾರಿನನ್ವಯ |
| ಇ) | ಒಡಂಬಡಿಕೆ ಅವಧಿ ಮುಗಿದಿದ್ದರೂ ನ್ಯಾಯಾಲಯದ ತಡೆಯಾಜ್ಞೆ ಆದೇಶ ವಿಲ್ಲದಿದ್ದರೂ ಕೇವಲ ಸಂಧಾನ ಹೆಸರಿನಲ್ಲಿ ಸಂಸ್ಥೆಗೆ ಶುಲ್ಕ ಸಂಗ್ರಹಣೆಗೆ ಸರ್ಕಾರ ಅವಕಾಶ ಮಾಡಿಕೊಟ್ಟಿರುವುದಕ್ಕೆ ಕಾರಣಗಳೇನು? | ನಿರ್ವಹಿಸದ ಕಾರಣ ದಿನಾಂಕ:10.02.2021 ರಂದು ರದ್ದುಗೊಳಿಸಲು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಸೂಚನೆ ನೀಡಿರುತ್ತಾರೆ. ನಂತರ ರಿಯಾಯಿತಿದಾರರು ಯೋಜನೆಯಿಂದ ನಿರ್ಗಮಿಸಿದ್ದು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ದಿನಾಂಕ:21.02.2021 ರಂದು ಯೋಜನೆಯನ್ನು ವಹಿಸಿಕೊಂಡು, ಮೆ: ರಿದ್ದಿ ಸಿದ್ದಿ ಅಸೋಸಿಯೇಟ್ಸ್ ರವರ ಮುಖಾಂತರ ಟೋಲ್ ಫೀ ಶುಲ್ಕವನ್ನು ಸಂಗ್ರಹಿಸ ಲಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.<br><br>ನೆಲಮಂಗಲ–ತುಮಕೂರು ವಿಭಾಗದ ಕಾರ್ಯಾಚರಣೆ ಮತ್ತು ನಿರ್ವಹಣೆಯು ದಿನಾಂಕ:20.07.2021ಕ್ಕೆ ಪೂರ್ಣಗೊಂಡಿದ್ದು, ಸದರಿ ಸಂಸ್ಥೆಯವರು ಮುಂದುವರಿಕೆಗಾಗಿ ಮದ್ಯಸ್ಥಿಕೆ ನ್ಯಾಯಮಂಡಳಿಯ (Arbitration Tribunal) ಮೊರೆ ಹೋಗಿದ್ದು, ಮಧ್ಯಸ್ಥಿಕೆ ನ್ಯಾಯಮಂಡಳಿ ಯವರು ಸದರಿ ಸಂಸ್ಥೆಗೆ 479 ದಿನಗಳ ವಿಸ್ತರಣೆಯನ್ನು ನೀಡಿರುವುದರಿಂದ ನಿರ್ವಹಣಾ ದಿನಾಂಕವು:06.11.2022 ರವರೆಗೆ ಮುಂದುವರೆದ ಕಾರಣ, ದಿನಾಂಕ:06.11.2022 ರವರೆಗೆ ಬಳಕೆಯ ಶುಲ್ಕದ ಸಂಗ್ರಹವನ್ನು M/s. JAS Tollway Pvt. Ltd ರವರು ಸಂಗ್ರಹಿಸಿರುತ್ತಾರೆ.<br><br>ಆರ್ಬಿಟ್ರೇಟರ್ ರವರ ವಿಸ್ತರಣೆಯ ವರದಿಯ |

| | | |
|---|---|---|
| | | ನಂತರ ಚೊಕ್ಕೇನಹಳ್ಳಿ ಮತ್ತು ಕುಲುಮೆಪಾಳ್ಯ ಟೋಲ್ ಪ್ಲಾಜಾಗಳನ್ನು ದಿನಾಂಕ: 07.11.2022 ರಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವಶಕ್ಕೆ ಪಡೆದಿದ್ದು, ಟೋಲ್ ಸಂಗ್ರಹ ಏಜೆನ್ಸಿಯವರಾದ ಮೆ: ಶ್ರೀ ಸಾಯಿ ಎಂಟರ್ ಪ್ರೈಸಸ್ ರವರ ಮುಖಾಂತರ ಟೋಲ್ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 37 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು